ಈ ಲೇಖನದ ವಿಷಯಾನುಕ್ರಮಣಿಕೆ


ಅನಂತನ ಅನಂತತೆ 2

ಗಂಗೆಯನ್ನೂ ಮೀರಿದ ಅನಂತ 2

ಸೂರ್ಯನನ್ನೂ ಮೀರಿದ ಅನಂತ 4

ಎಲ್ಲೆಲ್ಲೂ ತುಂಬಿ ನಿಂತಿರುವ ಅನಂತ 6

ಲಕ್ಷ್ಮೀಯನ್ನೂ ಮೀರಿದ ಅನಂತ 7

ಋಷಿಗಳನ್ನೂ ಮೀರಿದ ಅನಂತ 9

ಅವನ ಒಂದೊಂದು ಗುಣವೂ ಅನಂತ 11

ಕಾರುಣ್ಯದ ಮೂರ್ತಿ ಅನಂತ 15

# ಅನಂತನ ಅನಂತತೆ

ಅಂತ ಎಂದರೆ ಕೊನೆ. ಅನಂತ ಎಂದರೆ ಕೊನೆಯಿಲ್ಲದ್ದು, ಕೊನೆಯಿಲ್ಲದವನು ಎಂದರ್ಥ.

ನಾವೆಲ್ಲರೂ ಒಂದು ಪ್ರದೇಶದಲ್ಲಿ ಮಾತ್ರ ಇರುತ್ತೇವೆ. ಕಾವೇರಿಯ ತೀರದಲ್ಲಿರುವ ಒಬ್ಬ ವ್ಯಕ್ತಿ ಗಂಗೆಯ ತೀರದಲ್ಲಿ ಇರಲು ಸಾಧ್ಯವಿಲ್ಲ. ಮನುಷ್ಯನ ಇರುವಿಕೆಗೆ ಒಂದು ಅಂತ್ಯವಿದೆ. ಆದರೆ, ಭಗವಂತ ಇಲ್ಲಿಯೂ ಇದ್ದಾನೆ, ಅಲ್ಲಿಯೂ ಇದ್ದಾನೆ, ಎಲ್ಲೆಲ್ಲಿಯೂ ಇದ್ದಾನೆ. ಅವನು ಅನಂತ.

## ಗಂಗೆಯನ್ನೂ ಮೀರಿದ ಅನಂತ

ಗಂಗೆ ಗಂಗೋತ್ರಿಯಲ್ಲಿಯೂ ಇದ್ದಾಳೆ. ಹಿಮಾಲಯದ ಕಣಿವೆಯಲ್ಲಿದ್ದಾಳೆ. ಹರಿದ್ವಾರದ ಬಯಲಿನಲ್ಲಿದ್ದಾಳೆ. ಪ್ರಯಾಗ ಕಾಶಿಗಳಲ್ಲಿದ್ದಾಳೆ, ಅಲ್ಲಿ ಅವಳ ಹರಿವು ವಿಸ್ತಾರವಾದದ್ದು. ಸಮುದ್ರದ

ತಟದಲ್ಲಿ ಅವಳ ಅಂತ್ಯವಿದೆ. ಗಂಗೋತ್ರಿಯಲ್ಲಿನ ಪಾತ್ರವೇ ಬೇರೆ, ಹರಿದ್ವಾರದ ಪಾತ್ರವೇ ಬೇರೆ, ಸಮುದ್ರತೀರದ ವಿಶಾಲ ಪಾತ್ರವೇ ಬೇರೆ. ಮತ್ತು ಸಮುದ್ರದಲ್ಲಿ ಅಂತ್ಯ. ಅಲ್ಲಿಂದ ಮುಂದೆ ಗಂಗೆಯ ಹರಿವಿಲ್ಲ.

ಆದರೆ, ಭಗವಂತ ವೈಕುಂಠದಲ್ಲಿಯೂ ಇದ್ದಾನೆ. ಸತ್ಯ-ತಪೋ-ಜನ-ಮರ್ಹ- ಸ್ವರ್ಗ-ಭೂಮಿ-ಪಾತಾಳಗಲ್ಲಿಯೂ ಇದ್ದಾನೆ. ಬ್ರಹ್ಮಾಂಡದ ಒಳಗೆಲ್ಲ ಇದ್ದಾನೆ. ಬ್ರಹ್ಮಾಂಡದ ಆಚೆಯೂ ಇದ್ದಾನೆ. ಬ್ರಹ್ಮಾಂಡದ ಆಚೆಯಿರುವ ಆವರಣಗಳಲ್ಲಿ ಇದ್ದಾನೆ, ಅದರಾಚೆಯಿರುವ ಅವ್ಯಾಕೃತ ಆಕಾಶದಲ್ಲಿಯೂ ಇದ್ದಾನೆ. ಅಷ್ಟೇ ಅಲ್ಲ ಅದನ್ನೂ ಮೀರಿ “ಮಹತೋ ಮಹೀಯಾನ್” ಎನ್ನಿಸಿಕೊಳ್ಳುತ್ತಾನೆ.

ಗಂಗೆಯ ಹರಿವಿನಂತೆ ಒಂದೆಡೆ ಕೃಶನಾಗಿ ಮತ್ತೊಂದೆಡೆ ಸ್ಥೂಲನಾಗಿ, ಒಂದೆಡೆ ಸ್ವಲ್ಪವೇ ಗುಣವುಳ್ಳವನಾಗಿ ಮತ್ತೊಂದೆಡೆ ಹೆಚ್ಚು ಗುಣವುಳ್ಳವನಾಗಿ ಇಲ್ಲ. ಅಣುವಿನಲ್ಲಿ ಅಣುವಾಗಿ ಇರುವ, ಕಣದಲ್ಲಿ ಕಣವಾಗಿ ಇರುವ, ಮಹತ್ತಿನಲ್ಲಿ

ಮಹತ್ತಾಗಿ ಇರುವ ಶ್ರೀಹರಿ ಒಬ್ಬನೇ. ಅವನ ಎಲ್ಲ ರೂಪಗಳೂ ಸಕಲ ಗುಣಗಳಿಂದ ಪೂರ್ಣ. ಎಲ್ಲೆಡೆಯೂ ಪರಬ್ರಹ್ಮನಾಗಿಯೇ ಇದ್ದಾನೆ. ಹೀಗೆ ತನ್ನ ಆನಂತ್ಯದಲ್ಲಿ ಗಂಗಾದಿಗಳನ್ನು ಮೀರಿದ್ದಕ್ಕಾಗಿ ಭಗವಂತ ಅನಂತ.

## ಸೂರ್ಯನನ್ನೂ ಮೀರಿದ ಅನಂತ

ಸೂರ್ಯ ಒಬ್ಬನೆ. ಆದರೆ ಅವನ ಪ್ರಕಾಶ ಸಮಗ್ರ ಭೂಮಿಯ ಏಳು ಸಾಗರಗಳನ್ನೂ, ಏಳು ದ್ವೀಪಗಳನ್ನೂ ವ್ಯಾಪಿಸುತ್ತದೆ. ಮೇಲಿನ ಸ್ವರ್ಗ, ಅವನಿರುವ ಅಂತರಿಕ್ಷ ಕೆಳಗಿರುವ ಭೂಮಿ ಇಷ್ಟನ್ನೂ ಸೂರ್ಯ ತನ್ನ ಪ್ರಕಾಶದಿಂದ ಬೆಳಗುತ್ತಾನೆ. ಅವನು ಭೂಮಿಗೆ ಹತ್ತಿರನಾದರೆ ಭೂಮಿ ಸುಡುತ್ತದೆ. ಸ್ವರ್ಗಕ್ಕೆ ಹತ್ತಿರನಾದರೆ ಸ್ವರ್ಗ ಸುಡುತ್ತದೆ. ಮಧ್ಯದ ಅಂತರಿಕ್ಷದಲ್ಲಿಯೇ ಅವನಿರಬೇಕು.

ನಮ್ಮ ಸ್ವಾಮಿಯ ವ್ಯಾಪ್ತಿ ಹಾಗಲ್ಲ. ಅವನು ಸೂರ್ಯನಿಗೂ ಬೆಳಕನ್ನು ನೀಡುವ ತೇಜೋಮೂರ್ತಿ. ಆದರೆ, ಅವನು ನಮ್ಮ

ಅಂತರ್ಯಾಮಿಯಾಗಿ ನಮ್ಮೊಡನೆಯೇ ಇದ್ದಾನೆ. ಮತ್ತು ಸೂರ್ಯನ ಬೆಳಕು ಏಳುಸಾಗರದ ಭೂಮಿಗೆ ಸೀಮಿತ. ಆಚೆಯ ಲೋಕಾಲೋಕಪರ್ವತಗಳಿಗೆ ಅವನ ಬೆಳಕು ತಾಕುವದಿಲ್ಲ. ಅದರಾಚೆಯ ಅಂಧತಮಸ್ಸಿಗಂತೂ ಸೂರ್ಯನ ಕಿರಣವೂ ತಾಗುವದಿಲ್ಲ. ಆದರೆ ಭಗವಂತ ಅನಂತಪದ್ಮನಾಭನಾಗಿ ಬ್ರಹ್ಮಾಂಡದ ಘನೋದಕದಲ್ಲಿ ಪವಡಿಸಿದ್ದಾನೆ. ಅವನ ಪ್ರಭೆಯನ್ನು ಬ್ರಹ್ಮಾಂಡದ ಒಳಗಣ ಅಣುಅಣುವಿನಲ್ಲಿಯೂ ದೇವತೆಗಳು ಕಾಣುತ್ತಾರೆ. ಬ್ರಹ್ಮಾಂಡದ ಆಚೆಯಲ್ಲಿಯೂ ತತ್ವಾಭಿಮಾನಿ ದೇವತೆಗಳು ಕಾಣುತ್ತಾರೆ. ಆವರಣಗಳ ಆಚೆಯ ಅವ್ಯಾಕೃತ ಆಕಾಶದಲ್ಲಿಯೂ ಅವನ ಪ್ರಭೆಯನ್ನು — ಆ ಒಂದೇ ರೂಪವಲ್ಲ, ಪರಮಾತ್ಮನ ಕೃಷ್ಣ-ರಾಮ-ವ್ಯಾಸ-ಕಪಿಲ ಮುಂತಾದ ಸಕಲ ರೂಪಗಳ ಪ್ರಭೆಯನ್ನು — ಮಹಾಲಕ್ಷ್ಮೀದೇವಿ ಕಾಣುತ್ತಾಳೆ. ಹೀಗೆ ತನ್ನ ಆನಂತ್ಯದಲ್ಲಿ ಸೂರ್ಯಾದಿಗಳನ್ನು ಮೀರಿದ್ದಕ್ಕಾಗಿ ಭಗವಂತ ಅನಂತ.

## ಎಲ್ಲೆಲ್ಲೂ ತುಂಬಿ ನಿಂತಿರುವ ಅನಂತ

ಒಂದು ಸಣ್ಣ ಅಣುವಿದೆ. ಅದರೊಳಗೆ ಅದರಕ್ಕಿಂತಲೂ ಅಣುವಾಗಿ ದೇವರಿದ್ದಾನೆ. ಕಣವಿದೆ, ಕಣದಲ್ಲಿ ದೇವರಿದ್ದಾನೆ. ಮಣ್ಣಿನಲ್ಲಿ, ಕಲ್ಲಿನಲ್ಲಿ, ನೀರಿನಲ್ಲಿ, ಬಯಲಿನಲ್ಲಿ, ಗುಡ್ಡಗಳಲ್ಲಿ, ಬೆಟ್ಟಗಳಲ್ಲಿ, ಪರ್ವತಗಳಲ್ಲಿ, ಸಮಗ್ರ ಭೂಮಿಯಲ್ಲಿ, ಈ ಭೂಮಿಯ ಕೆಳಗಿರುವ ಅತಲ, ವಿತಲ, ಸುತಲ, ರಸಾತಲ, ತಲಾತಲ, ಪಾತಾಳ ಎಂಬ ಲೋಕಗಳಲ್ಲಿ, ಭೂಮಿಯ ಮೇಲಿರುವ ಅಂತರಿಕ್ಷ, ಸ್ವರ್ಗ, ಮಹರ್ಲೋಕ, ಜನಲೋಕ, ತಪೋಲೋಕ, ಸತ್ಯಲೋಕ ಎಂಬ ಲೋಕಗಳಲ್ಲಿ, ಅವನದೇ ಸ್ಥಾನವಾದ ವೈಕುಂಠ ಅನಂತಾಸನ, ಶ್ವೇತದ್ವೀಪಗಳಲ್ಲಿ, ಇದೆಲ್ಲದಕ್ಕೆ ಆಶ್ರಯವಾದ 50 ಕೋಟಿ ಯೋಜನ ವಿಸ್ತೀರ್ಣವಾದ ಬ್ರಹ್ಮಾಂಡದಲ್ಲಿ, ಅದರ ಹೊರಗೆ ಇರುವ 100 ಕೋಟಿ ಯೋಜನ ವಿಸ್ತೀರ್ಣವಾದ ಪೃಥಿವೀತತ್ವದಲ್ಲಿ (ತತ್ವ ಎಂದರೆ ಬ್ರಹ್ಮಾಂಡಕ್ಕೆ ಕಾರಣವಾದ ಕಚ್ಚಾವಸ್ತು), 1000 ಕೋಟಿ ಯೋಜನ ವಿಸ್ತೀರ್ಣವಾದ ಜಲತತ್ವದಲ್ಲಿ 10000 ಕೋಟಿ ಯೋಜನ ವಿಸ್ತೀರ್ಣವಾದ ಅಗ್ನಿತತ್ವದಲ್ಲಿ 1,00,000 ಕೋಟಿ ಯೋಜನ

ವಿಸ್ತೀರ್ಣವಾದ ವಾಯುತತ್ವದಲ್ಲಿ 10,00,000 ಕೋಟಿ ಯೋಜನ ವಿಸ್ತೀರ್ಣವಾದ ಆಕಾಶತತ್ವದಲ್ಲಿ,  ಒಂದು ಕೋಟಿ ಕೋಟಿ ಯೋಜನ ವಿಸ್ತೀರ್ಣವಾದ ಅಹಂಕಾರತತ್ವದಲ್ಲಿ ಹತ್ತು ಕೋಟಿ ಕೋಟಿ ಯೋಜನವಿಸ್ತೀರ್ಣವಾದ ಮಹತ್ತತ್ವದಲ್ಲಿ ಅದರಾಚೆಯ ಅನಂತ ಅವ್ಯಾಕೃತ ಆಕಾಶದಲ್ಲಿ ಏಕೋ ದೈವನಾಗಿ ಇರುವವನು ಒಂದೇ ರೂಪದಿಂದ ಇಷ್ಟನ್ನೂ ವ್ಯಾಪಿಸಿದ ಅನಂತ ನಮ್ಮ ಶ್ರೀಮನ್ನಾರಾಯಣ. ಲಕ್ಷ್ಮೀಸಮೇತನಾದ ನಾರಾಯಣ.

## ಲಕ್ಷ್ಮೀಯನ್ನೂ ಮೀರಿದ ಅನಂತ

ಪರಮಾತ್ಮನಿಗೆ ಎಷ್ಟು ಅಣುತರವಾದ ರೂಪವಿದೆಯೋ, ಎಷ್ಟು ಮಹತ್ತಾದ ರೂಪವಿದೆಯೋ, ಅಷ್ಟೇ ಅಣುತರವಾದ ಅಷ್ಟೇ ಮಹತ್ತಾದ ರೂಪವನ್ನು ಪಡೆದವಳು ನಮ್ಮಮ್ಮ ಮಹಾಲಕ್ಷ್ಮೀದೇವಿ. ಅವನಿರುವೆಡೆಯಲ್ಲ ಇರುವವಳು. ಅವನ ಸಕಲ ರೂಪಗಳಲ್ಲಿಯೂ ಜೊತೆಯಲ್ಲಿಯೇ ಇರುವ ಭಾಗ್ಯದೇವಿ ಅವಳು. ಹೀಗಾಗಿ ದೇಶದ ಆನಂತ್ಯ — ಅಂದರೆ ಎಷ್ಟು

ಪ್ರದೇಶದಲ್ಲಿ ಪರಮಾತ್ಮ ವ್ಯಾಪ್ತಿಯಿದೆಯೋ ಆ ರೀತಿಯ ವ್ಯಾಪ್ತಿ — ಲಕ್ಷ್ಮೀದೇವಿಗೂ ಇದೆ. ಆ ದೃಷ್ಟಿಯಿಂದ ಅವಳು ಪರಮಾತ್ಮನಿಗೆ ಸಮಾನಳಾದವಳು. ಅದಕ್ಕಾಗಿಯೇ ಅವಳನ್ನು ಸಮನಾ ಎಂದು ಕರೆದವು ವೇದಗಳು.

ಆದರೆ ಸಮಾನಾ ಎಂದು ಕರೆಯಲಿಲ್ಲ, ಆ ಮಾ ಎಂಬ ಅಕ್ಷರದಲ್ಲಿನ ದೀರ್ಘವನ್ನು ಹ್ರಸ್ವಮಾಡಿ ಸಮನಾ ಎಂದು ಕರೆದವು. ಅದಕ್ಕೆ ಕಾರಣವಿದೆ. ಕೆಲವು ಸಂದರ್ಭಗಳಲ್ಲಿ ಗುರುಗಳು ನಮ್ಮ ಜೊತೆಯಲ್ಲಿಯೆ ನಮ್ಮ ಸಮಾನ ಆಸನದಲ್ಲಿಯೇ ಬಂದು ಕುಳಿತುಬಿಡುತ್ತಾರೆ. ಅದು ಅವರ ಕಾರುಣ್ಯ. ಆದರೆ ಎಂದಿಗಾದರೂ ನಮಗೆ ಜ್ಞಾನವನ್ನು ಕರುಣಿಸುವ ಗುರುಗಳಿಗೆ ನಾವು ಸಮಾನರಾಗಲು ಸಾಧ್ಯವೇ. ಸರ್ವಥಾ ಇಲ್ಲ.

ಹಾಗೆ, ಲಕ್ಷ್ಮೀದೇವಿಯ ಮೇಲಣ ಅನಂತ ಕೃಪೆಯಿಂದ ಪರಮಾತ್ಮ ಅವಳನ್ನು ತಾನಿರುವ ಎಲ್ಲೆಡೆಯಲ್ಲಿ ಎಡೆ ಮಾಡಿ ಕೊಟ್ಟಿದ್ದಾನೆ. ಆದರೆ, ಸಾಮರ್ಥ್ಯದಲ್ಲಿ, ಸೌಂದರ್ಯದಲ್ಲಿ, ಜ್ಞಾನದಲ್ಲಿ, ಆನಂದದಲ್ಲಿ, ಪರಾಕ್ರಮದಲ್ಲಿ, ಔದಾರ್ಯದಲ್ಲಿ,

ಕಾರುಣ್ಯದಲ್ಲಿ ಎಲ್ಲದರಲ್ಲಿಯೂ ಅವನು ಅನಂತ. ಅನಂತಗುಣದ ಲಕ್ಷ್ಮೀದೇವಿಯೂ ಅವನ ಅನಂತ ಗುಣಗಳ ಸಮುದ್ರದ ಮುಂದೆ ಒಂದು ಸಣ್ಣ ಬಿಂದುವಾಗಿಬಿಡುತ್ತಾಳೆ.

ಹೀಗಾಗಿ — ಪರಮಾತ್ಮ ಇರುವ ಎಲ್ಲೆಡಿಯೂ ಇದ್ದಾಳೆ, ಪರಮಾತ್ಮ ಎಂದಿನಿಂದ ಇದ್ದಾನೆಯೋ ಇದ್ದಾನೆಯೋ ಅಂದಿನಿಂದಲೂ ಇದ್ದಾಳೆ, ಎಂದಿನವರೆಗೆ ಇರುತ್ತಾನೆಯೋ ಅಂದಿನವರೆಗೂ ಇರುತ್ತಾಳೆ ಆದ್ದರಿಂದ — ಅವಳು ಪರಮಾತ್ಮನಿಗೆ ಸಮಾನಳಾದರೂ, ಅವಳು ಗುಣದಲ್ಲಿ ಪರಮಾತ್ಮನಿಗೆ ಎಂದಿಗೂ ಸಾಟಿಯಲ್ಲ ಆದ್ದರಿಂದ ಆ ಮಾ ಎಂಬ ಅಕ್ಷರದಲ್ಲಿನ ದೀರ್ಘವನ್ನು ತೆಗೆದು ಹ್ರಸ್ವ ಅಕ್ಷರವನ್ನಿಟ್ಟು "ನಮ್ಮಮ್ಮ ಜಯಲಕ್ಷ್ಮಿ ನಿನಗಿಂತ ಕುಂದೇನೋ, ಕುಂದೇ ಕಣಯ್ಯ" ಎಂದು ತಿಳಿಸಲು ಸಮನಾ ಎಂದು ಕರೆದವು, ವೇದಗಳು.

## ಋಷಿಗಳನ್ನೂ ಮೀರಿದ ಅನಂತ

ಋಷಿಗಳು ಸರ್ವಜ್ಞರಾದವರು. ಅವರು ವೇದಗಳನ್ನು ಕಂಡು, ಪರಮಾತ್ಮನ

ಸಾಕ್ಷಾತ್ಕಾರವನ್ನು ಪಡೆದು ಶ್ರೇಷ್ಠ ಜ್ಞಾನವನ್ನು ಪಡೆದು ಸರ್ವಜ್ಞರು ಎನಿಸಿಕೊಳ್ಳುತ್ತಾರೆ. ಮನುಷ್ಯರು ಮಾಡುವ ಯಾವುದೇ ಪ್ರಶ್ನೆಗಳಿಗೆ ನಿರಾಯಾಸವಾಗಿ ಉತ್ತರವನ್ನು ನೀಡಬಲ್ಲರು. ಆದರೆ, ಅವರ ಸರ್ವಜ್ಞತ್ವಕ್ಕೆ ಮಿತಿಯಿದೆ. ದೇವತೆಗಳು ಅವರಿಗಿಂತ ಮಿಗಿಲಾದ ಸರ್ವಜ್ಞರು. ಅನಂತ ಜೀವರಾಶಿಗಳನ್ನು ನಿಯಮನ ಮಾಡುವ ಮಹಾನುಭಾವರು. ಹೀಗಾಗಿ ಮಹಾಜ್ಞಾನದ ದೇವತೆಗಳು. ಆದರೆ, ಅವರ ಸರ್ವಜ್ಞತ್ವಕ್ಕೂ ಮಿತಿಯಿದೆ. ಕುಳಿತು ಆಲೋಚಿಸಿದರೆ ಮಾತ್ರ ಬಹುತೇಕ ವಿಷಯಗಳನ್ನು ತಿಳಿಯಬಲ್ಲರು. ಸಕಲವನ್ನೂ ತಿಳಿಯಲಾರರು. ಜಗತ್ತಿನ ಸ್ರಷ್ಟಾರರಾದ ಬ್ರಹ್ಮದೇವರೂ ಸರ್ವಜ್ಞರು. ಅವರು ಸಮಗ್ರ ಸಾವರಣ ಬ್ರಹ್ಮಾಂಡದ ಅಣುಅಣುವಿನ ಜ್ಞಾನವನ್ನು ಪಡೆದ ಜ್ಞಾನಮೂರ್ತಿಗಳು. ಅನಂತ ವೇದಗಳ ಅನಂತ ಅಕ್ಷರಗಳ ಅನಂತ ಅಭಿಪ್ರಾಯವನ್ನೂ ಬಲ್ಲ ಸರ್ವಜ್ಞರು. ಆದರೆ, ಅವರಿಗೂ ಎರಡು ವಿಷಯ ಪೂರ್ಣವಾಗಿ ಅರ್ಥವಾಗುವದಿಲ್ಲ. ಮಹಾಲಕ್ಷ್ಮೀದೇವಿಯ, ಅವಳೊಡೆಯ ನಾರಾಯಣನ ಗುಣಗಳನ್ನು

ತಿಳಿಯಲು ಅವರಿಗೆ ಸಾಧ್ಯವಾಗುವದಿಲ್ಲ. ಅಲ್ಲಿ ಅವರ ಸರ್ವಜ್ಞತ್ವಕ್ಕೆ ಮಿತಿಯಿದೆ. ಲೋಕದ ವಿಷಯದಲ್ಲಿ ಅನಂತವಾದ ಅವರ ಸರ್ವಜ್ಞತ್ವ ಲಕ್ಷ್ಮೀನಾರಾಯಣರ ವಿಷಯದಲ್ಲಿ ಅಂತ್ಯವಾಗಿಬಿಡುತ್ತದೆ.

## ಅವನ ಒಂದೊಂದು ಗುಣವೂ ಅನಂತ

ಈ ಬ್ರಹ್ಮದೇವರಷ್ಟೇ ಅಲ್ಲ, ಹಿಂದೆ ಆದ, ಮುಂದೆ ಆಗುವ ಅನಂತ ಬ್ರಹ್ಮದೇವರು, ಅನಂತ ದೇವತೆಗಳು, ಅನಂತ ಋಷಿಗಳು, ಅನಂತ ಮನುಷ್ಯರು ಇವರೆಲ್ಲರ ಜ್ಞಾನವನ್ನು ಒಂದೆಡೆ ಹಾಕಿ ಅದನ್ನು ಒಂದು ಸಮುದ್ರ ಎಂದು ಮಾಡಿದಲ್ಲಿ, ಆ ಸಮುದ್ರದಷ್ಟು ಜ್ಞಾನ ಮಹಾಲಕ್ಷ್ಮೀದೇವಿಯ ಜ್ಞಾನದ ಮುಂದೆ ಲೆಕ್ಕಕ್ಕೇ ಬಾರದ ಬಿಂದುವಾಗಿಬಿಡುತ್ತದೆ. ಮೇಲೆ ತಿಳಿಸಿದ ಸಮಗ್ರ ಸಾವರಣ ಬ್ರಹ್ಮಾಂಡ ಅವಳ ಜ್ಞಾನವೆಂಬ ಆಕಾಶದಲ್ಲಿ ಒಂದು ಧೂಳಿನ ಕಣವೂ ಅಲ್ಲವಂತೆ. ಕಣ್ಣಿಗೆ ಕಾಣದ ಪರಮಾಣುವಿನ ಸ್ಥಾನವನ್ನು ಪಡೆಯುತ್ತದಂತೆ. ಅಷ್ಟು ಅನಂತಜ್ಞಾನದವಳು

ಮಹಾಲಕ್ಷ್ಮೀದೇವಿ ಎಂದು ವೇದಗಳು ಕೊಂಡಾಡುತ್ತವೆ.

ಅಂತಹ ಅನಂತ ಜ್ಞಾನದ ಮಹಾಲಕ್ಷ್ಮೀದೇವಿ ಪರಮಾತ್ಮನ ಗುಣಸಮುದ್ರದಲ್ಲಿ ಅಂತ್ಯಗಾಣದೆ ನಿಂತುಬಿಡುತ್ತಾಳೆ ಎನ್ನುತ್ತಾರೆ ತ್ರಿವಿಕ್ರಮಪಂಡಿತಾಚಾರ್ಯರು. ಸಣ್ಣ ಕೆರೆಗಳಲ್ಲಿ, ಜೋರು ಹರಿವಿರದ ಪುಟ್ಟ ನದಿಗಳಲ್ಲಿ ಉಪಯೋಗಿಸಲಿಕ್ಕೆ ಹರಿಗೋಲನ್ನು ಜನರು ಬಳಸುತ್ತಾರೆ. ಆ ಹರಿಗೋಲನ್ನೇರಿ ತುಂಬಿ ಹರಿಯುವ ಭೀಕರ ಪ್ರವಾಹವನ್ನು ದಾಟಲು ಸಾಧ್ಯವೇ? ಆ ಹರಿಗೋಲನ್ನೇರಿ ಭೋರ್ಗರೆವ ಸಮುದ್ರದ ಈಚೆಯ ದಡದಿಂದ ಆಚೆಯ ದಡಕ್ಕೆ ಹೋಗಲು ಸಾಧ್ಯವೇ? ಭೂಮಿಯಲ್ಲಿರುವ ಸಮುದ್ರದಲ್ಲಿಯೇ ಹರಿಗೋಲು ಹಾಯಲು ಸಾಧ್ಯವಿಲ್ಲದಾಗ ಸಮಗ್ರ ಬ್ರಹ್ಮಾಂಡವನ್ನು ಕಬಳಿಸಿ ನಿಂತ ಪ್ರಳಯೋದಕದಲ್ಲಿ ಹರಿಗೋಲು ಯಾತರ ಲೆಕ್ಕ ? ಆತರ ಲೆಕ್ಕ — ಅಂದರೆ ಪ್ರಳಯೋದಕದಲ್ಲಿ ಒಂದು ಹರಿಗೋಲಿಗೆ ಯಾವ ಪರಿಸ್ಥಿತಿ ಇರುತ್ತದೆಯೋ ಆ ಪರಿಸ್ಥಿತಿ — ಅನಂತಜ್ಞಾನದ ಮಹಾಲಕ್ಷ್ಮೀದೇವಿಗೆ ಪರಮಾತ್ಮನ

ಗುಣಗಳ ವಿಷಯದಲ್ಲಿ ಉಂಟಾಗುತ್ತದೆ ಎನ್ನುತ್ತಾರೆ ನಮ್ಮ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು — **“ಯಾತ್ರಾಪಾತ್ರಂ ಪಯೋಧಾವಿವ ಲಯಸಮಯೇ”**

ಅಷ್ಟೇ ಅಲ್ಲ, ಈ ಲಕ್ಷ್ಮೀದೇವಿಗೆ ಅದೆಷ್ಟು ಅನಂತಜ್ಞಾನವಿದೆಯೋ ಅಷ್ಟನ್ನೂ ಒಂದು ಎಂದು ಲೆಕ್ಕ ಹಾಕಿ ಅದರ ಅನಂತಪಟ್ಟಾದ ಜ್ಞಾನವನ್ನು ಅನಂತಾನಂತಜೀವರಾಶಿಗಳಿಗೂ ನೀಡಿ — ಅಂದರೆ ಕಲ್ಪಿತವಾದ ಅನಂತಲಕ್ಷ್ಮಿಯರ ಜ್ಞಾನವನ್ನು ಒಬ್ಬೊಬ್ಬ ಜೀವನಿಗೂ ನೀಡಿ — ಅವರಿಗೆ ಐದೇ ಜ್ಞಾನೇಂದ್ರಿಯಗಳಲ್ಲ, ಅನಂತ ಜ್ಞಾನೇಂದ್ರಿಯಗಳನ್ನು ನೀಡಿ, ಇಷ್ಟು ಸಮಯ ಎಂದು ನಿಗದಿ ಮಾಡದೇ ಅನಂತ ಕಾಲದ ಅವಧಿಯನ್ನು ನೀಡಿ, ದೇವರ ಅನಂತ ಗುಣವಲ್ಲ, ಕೋಟಿಯಲ್ಲ, ಲಕ್ಷವಲ್ಲ, ಸಾವಿರವಲ್ಲ, ನೂರಲ್ಲ, ಹತ್ತಲ್ಲ, ಒಂದು ಗುಣವನ್ನು ತಿಳಿಯಿರಿ ಎಂದರೆ ತಿಳಿಯಲು ಸಾಧ್ಯವಿಲ್ಲ. ಅಷ್ಟು ಅನಂತ ನಮ್ಮ ಶ್ರೀಮನ್ನಾರಾಯಣ.

ಅಷ್ಟೇ ಅಲ್ಲ, ಒಂದೇ ಗುಣವನ್ನು ಕೋಟಿ ಭಾಗ ಮಾಡಿ , ಆ ಗುಣವನ್ನು ಮತ್ತೆ ಕೋಟಿ ಭಾಗ ಮಾಡಿ, ಹೀಗೆ ಕೋಟಿ ಬಾರಿ ಅದನ್ನು ವಿಭಾಗ ಮಾಡಿಮಾಡಿ, ಅಷ್ಟು ಸಣ್ಣ ಗುಣವನ್ನು ಪೂರ್ಣವಾಗಿ ತಿಳಿಯಿರಿ ಎಂದರೆ ತಿಳಿಯಲಿಕ್ಕೆ ಸಾಧ್ಯವಿಲ್ಲದವನು ನಮ್ಮ ಸ್ವಾಮಿ ಎನ್ನುತ್ತಾರೆ ಶ್ರೀಮದಾನಂದತೀರ್ಥ-ಭಗವತ್ಪಾದಾಚಾರ್ಯರು —

**“ಏತೈಃ ಸುರಾದಿಭಿಃ**
**ಅತಿಪ್ರತಿಭಾದಿಯುಕ್ತೈಃ**
**ಯುಕ್ತೈಃ ಸಹೈವ ಸತತಂ**
**ಪ್ರವಿಚಿಂತಯದ್ಭಿಃ ।**
**ಪೂರ್ತೇರಚಿಂತ್ಯಮಹಿಮಃ**
**ಪರಮಃ ಪರಾತ್ಮಾ”** ಎಂದು.

## ಕಾರುಣ್ಯದ ಮೂರ್ತಿ ಅನಂತ

ಇಂಥಾ ಅನಂತ, ಜೀವಪ್ರಪಂಚದಲ್ಲಿ ಅತ್ಯಂತ ಸಣ್ಣವರಾದ ನಮ್ಮ ಮೇಲೂ ಪೂರ್ಣಾನುಗ್ರಹ ಮಾಡುತ್ತಾನೆ, ನಮ್ಮ ತಪ್ಪನ್ನು ಮನ್ನಿಸುತ್ತಾನೆ, ನಮ್ಮನ್ನು ಸರಿದಾರಿಯಲ್ಲಿ ನಡೆಸುವ ಗೆಳೆಯನಾಗುತ್ತಾನೆ, ಉಪದೇಶಿಸುವ ಗುರುವಾಗುತ್ತಾನೆ, ಪ್ರೀತಿ ನೀಡುವ ವಲ್ಲಭನಾಗುತ್ತಾನೆ, ಸಾಂತ್ವನ ಮಾಡುವ ತಾಯಿಯಾಗುತ್ತಾನೆ, ಕೈ  ಹಿಡಿದು ಮುನ್ನಡೆಸುವ ತಂದೆಯಾಗುತ್ತಾನೆ, ಒಟ್ಟಾರೆ ನಮ್ಮ ಸರ್ವಸ್ವವಾಗಿ ನಮ್ಮ ಅಂತರ್ಯಾಮಿಯಾಗಿಯೇ ಇದ್ದಾನೆ ಎನ್ನುವದೇ ಅವನ ಕಾರುಣ್ಯದ ಅನಂತತೆಯನ್ನು ಸಾರುತ್ತದೆ.

ಅಂಥಾ ಅನಂತನಿಗೆ, ನಾವು ನಮ್ಮ ಅನಂತ ಜನ್ಮಗಳಲ್ಲಿಯೂ ಮಾಡಿದ ಅನಂತಾನಂತಕರ್ಮಗಳನ್ನು ನೆನೆದು, ಅವನ ಪಾದಕ್ಕೊಪ್ಪಿಸಿಕೊಂಡು ಅನಂತನಮಸ್ಕಾರಗಳನ್ನು ಸಲ್ಲಿಸೋಣ.

ಅನಂತಚತುರ್ದಶಿಯಂದು ಅನಂತ ಎಂಬ ಶೇಷನ ಮೇಲೆ ಕುಳಿತು, ಅನಂತ ಎಂಬ ಹೆಸರಿನ ರುದ್ರ-ಗರುಡ-ವಾಯು-ಬ್ರಹ್ಮರಿಂದ ಪೂಜಿತನಾಗಿ, ಅನಂತಾ ಎಂಬ ಲಕ್ಷ್ಮಿದೇವಿಯನ್ನು ತೊಡೆಯ ಮೇಲೆ ಕೂಡಿಸಿಕೊಂಡು, ನಮ್ಮ ಸಾಂತಪೂಜೆಯನ್ನೇ ಸ್ವೀಕರಿಸುವ, ಆ ಸಾಂತ ಪೂಜೆಯಲ್ಲಿ ನಾವು ತೋರುವ ನಿರ್ಮಲ ಭಕ್ತಿಯಿಂದ ತೃಪ್ತನಾಗಿ ನಮ್ಮ ಅನಂತಪಾಪಗಳನ್ನು ಪರಿಹರಿಸುವ, ಅನಂತಕಾಲದವರೆಗೆ ಮಕ್ತಿಯನ್ನೀಯುವ ಅನಂತ ಎಂಬ ಶ್ರೀಮನ್ನಾರಾಯಣನಿಗೆ ನಮ್ಮ ಸರ್ವಸ್ವವನ್ನೂ ಸಮರ್ಪಿಸಿಕೊಳ್ಳೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491